**ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.**
**ಕನಕಪುರ.**

CC No. 645/2012

CW -2 PW - 1

| | | |
|---|---|---|
| ಹೆಸರು | ಃ | ಮಾದಪ್ಪ |
| ತಂದೆಯ ಹೆಸರು | ಃ | ಶಿವನೇಗೌಡ |
| ವಯಸ್ಸು | ಃ | 56 ವರ್ಷ |
| ಉದ್ಯೋಗ | ಃ | Foresh guard |
| ವಾಸ | ಃ | ಹೊನ್ನಿಗನಹಳ್ಳಿ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 14.09.2022

ನಾನು 2001 ರಿಂದ ಇಲ್ಲಿಯರವರೆಗೆ ಅರಣ್ಯ ರಕ್ಷಕನಾಗಿ ನಾರಾಯಣಪುರದಲ್ಲರುವ ಬೆಟ್ಟಳ್ಳಿ ವಾಡೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 22.02.2011 ರಂದು ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ನಾರಾಯಣಪುರದ ಬೆಟ್ಟಳ್ಳಿ ವಾಡೆಯ ಅರಣ್ಯ ಪ್ರದೇಶದಲ್ಲಿ ಗಸ್ತು ಮಾಡುತ್ತಿದ್ದಾಗ ಕಲ್ಲು ಗಣಿಗಾರಿಕೆ ನಡೆಸುತ್ತಿದ್ದಾಗ ಅರಣ್ಯ ಪ್ರದೇಶದ ಒಳಗಡೆ ಹಿಟಾಕಿ ವಾಹನವು ನಿಂತಿತ್ತು. ಆರೋಪಿಯು ಕಗ್ಗಲಿ, ಚುಜ್ಜಲಿ, ತೆಪ್ಪಾಲೆ, ಉರುಗಲ ಮರಗಳನ್ನು ಬುಡ ಸಮೇತ ತೆಗೆದು ಕೆಳಕ್ಕೆ ಉರುಳಿಸಿರುತ್ತಾರೆ. ಮಹಜರ್ ಕ್ರಮ ಜರುಗಿಸಿ FIR ಅನ್ನು ಸಲ್ಲಿಸಿರುತ್ತೇವೆ. ಈಗ ಸಾಕ್ಷಿಗೆ ತೋರಿಸುತ್ತಿರುವ ಮಹಜರ್ ಅನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಅನುಮತಿಸಲಾಯಿತು).

ಪಾಟೀ ಸವಾಲು : ಎಪಿಪಿ ಯವರಿಂದ :

ದಿನಾಂಕಃ 22.02.2011 ರಂದು ನಾನು ಮತ್ತು ಸಿಬ್ಬಂದಿಯ ಜೊತೆ ಅರಣ್ಯ ಪ್ರದೇಶಕ್ಕೆ ಗಸ್ತು ಮಾಡಲು ಹೋಗಿರುತ್ತೇನೆ ಎಂದರೆ ಸರಿ. ಸರ್ವೆ ನಂ. 67 ರ ಒಳಗಡೆ ಹಿಟಾಚಿ ವಾಹನ ಅಕ್ರಮವಾಗಿ ಪ್ರವೇಶ ಮಾಡಿದ್ದು ನಾನು ಮತ್ತು ಸಿಬ್ಬಂದಿ ಹೋಗಿ ವೀಕ್ಷಿಸಿದಾಗ ಅದು ಕಲ್ಲು ಗಣಿಗಾರಿಕೆ ಗುತ್ತಿಕೆ ಸಂಖ್ಯೆ 728 ಎಂಬುದಕ್ಕೆ ಸಂಬಂಧಿಸಿದ್ದು ಹಿಟಾಚಿ ವಾಹನ ಕೋರೆ ಪ್ರದೇಶವನ್ನು ಹೊರತು ಪಡಿಸಿ ಹೊರಗಿನ ಪ್ರದೇಶದಲ್ಲಿ ರಸ್ತೆಯನ್ನು ನಿರ್ಮಾಣ ಮಾಡಿಕೊಂಡು ಅರಣ್ಯ ಪ್ರದೇಶದಲ್ಲಿ ಹಿಟಾಚಿ ವಾಹನವನ್ನು ನಿಲ್ಲಿಸಿರುವುದು ಕಂಡು ಬಂದಿರುತ್ತದೆ. ನಿಪಿ-1 ರಲ್ಲಿರುವ 1 ರಿಂದ 9 ಮರಗಳನ್ನು ಕಡಿದು ನಾಶಪಡಿಸಿರುತ್ತಾರೆ ಎಂದು ತಿಳಿದು ಬಂದಿರುತ್ತದೆ. ಮತ್ತು ಪಂಚರು ಯಾರು ಇಲ್ಲದೆ ಇದ್ದ ಕಾರಣ ನಾವೇ ಪಂಚರಾಗಿದ್ದು ಮಹಜರ್ ಕ್ರಮ ಜರುಗಿಸಿರುತ್ತೇವೆ ಎಂದರೆ ಸರಿ.

ಪಾಟೀ ಸವಾಲು : ಶ್ರೀ. ಆರ್.ಸಿ. ಆರೋಪಿತರ ಪರ ವಕೀಲರಿಂದಃ

ಬೆಟ್ಟಳ್ಳಿ ವಾಡೆ ಸರ್ವೆ ನಂ. 67 ರಲ್ಲಿ ಬರುತ್ತದೆ. ಸರ್ವೆ ನಂ. 67 ರಲ್ಲಿ 400 ಎಕರೆಗೂ ಮೇಲ್ಪಟ್ಟಂತೆ ಇರುತ್ತದೆ. ಸರ್ವೆ ನಂ. 67 ರಲ್ಲಿ ಕಗ್ಗಲಿ, ಜುಜ್ಜಲಿ, ಪೆಪ್ಪಾಲೆ, ಉರುಗಲ ಮರಗಳು ಇರುತ್ತವೆ. ಸರ್ವೆ ನಂ. 67 ರಲ್ಲಿ ಎಷ್ಟು ಮರಗಳು ಇರುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಕೆಬ್ಬಳ್ಳಿ ಗ್ರಾಮದಿಂದ ಗಸ್ತು ಮಾಡಲು ಪ್ರಾರಂಭಸಿದೆವು. ಕೆಬ್ಬೆಳ್ಳಿ ಗ್ರಾಮದಿಂದ ಅರ್ಧ ಕಿಲೋ ಮೀಟರ್ ಅಂತರದಲ್ಲಿ ಕ್ವಾರೆ ಮಾಡುತ್ತಿರುತ್ತಾರೆ. ಅರಣ್ಯ ಪ್ರದೇಶದ ವ್ಯಾಪ್ತಿಯಿಂದ ಪಶ್ಚಿಮ ದಿಕ್ಕಿಗೆ

ಕ್ವಾರೆ ನಡೆಯುತ್ತಿರುತ್ತದೆ. ಆರೋಪಿಗಳು ಸರ್ವೆ ನಂ. 67 ರಲ್ಲಿ ಕಲ್ಲು ಗಣಿಗಾರಿಕೆ ಮಾಡುತ್ತಿರುವುದು 10-15 ವರ್ಷಗಳಿಂದ ಕಂಡು ಬಂದಿರುತ್ತದೆ. ಕ್ವಾರೆ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆ ಮಾಡಲು ಎಷ್ಟು ವಿಸ್ತೀರ್ಣಕ್ಕೆ ಅನುಮತಿ ನೀಡಿರುತ್ತದೆ ಎಂದು ನನಗೆ ಗೊತ್ತಿಲ್ಲ. ಕ್ವಾರೆಯಿಂದ ಹಿಟಾಚಿ ವಾಹನವು ಅರಣ್ಯ ಪ್ರದೇಶದಿಂದ 15 ಮೀಟರ್ ಒಳಗಡೆ ಬಂದಿರುತ್ತದೆ. 15 ಮೀಟರ್ ಹಿಟಾಚಿ ವಾಹನವು ಅರಣ್ಯ ಪ್ರದೇಶದ ಒಳಗಡೆ ಬಂದಿದ್ದ ಬಗ್ಗೆ ಮೇಲಾಧಿಕಾರಿಗಳಿಗೆ ತಿಳಿಸಿರುತ್ತೇವೆ. ನಿಪಿ-1 ರಲ್ಲಿ ಕ್ವಾರೆಯಿಂದ 15 ಮೀಟರ್ ಅರಣ್ಯ ಪ್ರದೇಶ ಒಳಗಡೆ ನಮೂದು ಮಾಡಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಹಿಟಾಚಿ ವಾಹನದ ಬಳಿ ಯಾರೂ ಇರುವುದಿಲ್ಲ. ನಾವು ಹೋದಂತಹ ಸಂದರ್ಬದಲ್ಲಿ ಹಿಟಾಚಿ ವಾಹನವು ನಿಂತಿತ್ತು. ಹಿಟಾಚಿ ವಾಹನದ ಬಣ್ಣ ಹಳದಿ ಬಣ್ಣದಾಗಿತ್ತು. ಹಿಟಾಚಿ ವಾಹನದ ನಂಬರ್ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಮತ್ತು ಹೇಳಿಕೆ ಯಲ್ಲಿ ಹಿಟಾಚಿ ವಾಹನದ ಬಣ್ಣವನ್ನು ನಮೂದು ಮಾಡಿರುವುದಿಲ್ಲ. ನಾವು ಹೋಗುವ ಮುಂಚೆ ಮರ ಗಿಡಗಳನ್ನು ಬೇರು ಸಮೇತ ನಾಶಪಡಿಸಿರುತ್ತಾರೆ. ಎಷ್ಟು ಮರಗಳನ್ನು ಬೇರು ಸಮೇತ ನಾಶಪಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮೇಲಾಧಿಕಾರಿಗಳ ಮುಂದೆ ಹೇಳಿಕೆಯನ್ನು ನೀಡುವಾಗ ಯಾವ ಮರಗಳನ್ನು ಬೇರು ಸಮೇತ ನಾಶ ಪಡಿಸಿರುತ್ತಾರೆ ಎಂದು ಹೇಳಿರುತ್ತೇನೆ. ನಿಪಿ-1 ಕ್ಕೆ ಸಹಿ ಮಾಡುವ ಮುಂಚೆ ಓದಿ ತಿಳಿದುಕೊಂಡಿರುತ್ತೇನೆ. ನಿಪಿ-1 ರಲ್ಲಿ ಕಗ್ಗಲೀ ಮರವನ್ನು ನಮೂದು ಮಾಡಿದ  ಬಗ್ಗೆ ನನಗೆ ನೆನಪಿರುವುದಿಲ್ಲ. ದಿನಾಂಕ 22.02.2011 ರಂದು ಸಂಜೆ 5.00 ಗಂಟೆಗೆ ಮಾಹಿತಿಯನ್ನು ನಮ್ಮ ಅಧಿಕಾರಿಗೆ ತಿಳಿಸಿರುತ್ತೇನೆ. ನಮ್ಮ ಮೇಲಾಧಿಕಾರಿಗಳು ನಾವು ಮಾಹಿತಿ ನೀಡಿದ ನಂತರ ಮರುದಿನ ಬಂದಿರುತ್ತಾರೆ. ಘಟನೆ ಆದ ಮರುದಿನ ಬೆಳಿಗ್ಗೆ 9.30 ರಿಂದ 11.30 ವರೆಗೆ ಮಹಜರ್ ಕ್ರಮ ವನ್ನು ಜರುಗಿಸಿರುತ್ತೇವೆ. ಹಿಟಾಚಿ ವಾಹನದ ಮಾಲೀಕರು

ಯಾರು ಎಂದು ನನಗೆ ಗೊತ್ತಿಲ್ಲ. ಕ್ವಾರೆ ಗಣಿಯಿಂದ ಅರಣ್ಯ ಪ್ರದೇಶದ ಸುಮಾರು 50 ಮೀಟರ್ ಅಂತರದವರೆಗೂ ಯಾವುದೇ ಮರಗಿಡಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಹಿಟಾಚಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ವಾಹನಕ್ಕೂ ಯಾವುದೇ ಸಂಬಂಧವಿಲ್ಲದೆ ಇದ್ದರೂ ಸಹ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಕನಕಪುರ**